ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ : ಸರ್ಕಾರಕ್ಕೆನಾದರೂ ಧೃಡವಾದ ಛಲ ಇದ್ದರೆ ಜನಗಳ ಬಗ್ಗೆ ಕಾಳಜಿ ಇದ್ದರೆ, ನಿಜವಾಗಿಯೂ ಜನಸೇವೆಯನ್ನು ಮಾಡಬೇಕೆಂಬ ಆಸೆ ಇದ್ದರೆ.....

ಅಧ್ಯಕ್ಷರು : ದಯಮಾಡಿ ಶಂಕರಲಿಂಗೇಗೌಡರೇ, ಮುಂದಿನ ಪ್ರಶ್ನೆಗೆ ಹೋಗೋಣ. ಆಡಳಿತ ಪಕ್ಷದವರು ಹೆಚ್ಚಿನ ಸಂಖ್ಯೆಯಲ್ಲಿ, ಪೂರ್ಣ ತಯಾರಿಯಲ್ಲಿ ಬಂದಿದ್ದಾರೆ, ನನಗೆ ಬಹಳ ಸಂತೋಷವಾಗಿದೆ.

ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಭೋಧಕರ ಮತ್ತು ಭೋಧಕೇತರ ಸಿಬ್ಬಂದಿಯ ಖಾಲಿ ಹುದ್ದೆಗಳು.

147 - ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಯಾವಯಾವ ವಿಷಯಗಳ ಭೋಧಕರ ಹುದ್ದೆಗಳು ಯಾವ ವರ್ಷದಿಂದ ಖಾಲಿಯಾಗಿ ಉಳಿದಿವೆ ಮತ್ತು ಭೋಧಕೇತರ ಹುದ್ದೆಗಳು ಖಾಲಿಯಾಗಿರುವುವು ಎಷ್ಟು? (ಕಳೆದ ಮೂರು ವರ್ಷಗಳ ವಿವರ ನೀಡುವುದು)

ಆ) ಹುಬ್ಬಳ್ಳಿ ಮತ್ತು ಬಳ್ಳಾರಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳು ಯಾವ ಯಾವ ಕೊರತೆಯಿಂದ ಬಳಲುತ್ತಿವೆ ಅದರ ನಿವಾರಣೆಗಾಗಿ ಸರ್ಕಾರವು ಯಾವ ಕ್ರಮ ಕೈಗೊಂಡಿದೆ, ಕೈಗೊಳ್ಳಬಯಸಿದೆ?

ಡಾ: ಎಂ. ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಕಳೆದ 3 ವರ್ಷಗಳ ಖಾಲಿ ಹುದ್ದೆಗಳ ವಿವರ

ಭೋಧಕರು	*ಭೋಧಕೇತರರು*	
	'ಸಿ' ದರ್ಜೆ	'ಡಿ' ದರ್ಜೆ
891	105	125

(ಭೋಧಕರು ವಿಷಯವಾರು ವಿವರಗಳನ್ನು ಲಗತ್ತಿಸಿದೆ)

ಆ) ಹುಬ್ಬಳ್ಳಿ ಮತ್ತು ಬಳ್ಳಾರಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಯಗಳು ಈಗ ಸ್ವಾಯತ್ತ ಸಂಸ್ಥೆಗಳಾಗಿದ್ದು, ಈ ಮಹಾವಿದ್ಯಾಲಯದಲ್ಲಿ ಭೋಧಕರ ಕೊರತೆ ಇದ್ದು ಈ ಕೊರತೆಯನ್ನು ಪರಿಹರಿಸಲು ಸಂಸ್ಥೆಯ ನಿರ್ದೇಶಕರು ಈಗಾಗಲೇ ಅಭ್ಯರ್ಥಿಗಳ ಸಂದರ್ಶನವನ್ನು ಮಾಡಿ ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶಗಳನ್ನು ಬಿಡುಗಡೆ ಮಾಡಲಾಗಿದೆ. ಈ ಸಂಸ್ಥೆಗಳ ಕಟ್ಟಡ ನಿರ್ವಹಣೆ ಹಾಗೂ ಸಾಧನ ಸಲಕರಣೆಗಳನ್ನು ಕೊಳ್ಳುವ ಸಲುವಾಗಿ ಕಿಮ್ಸ್ ಹುಬ್ಬಳ್ಳಿಗೆ ರೂ. ೧೨೦.೦೦ ಲಕ್ಷ ಮತ್ತು ವಿಮ್ಸ್ ಬಳ್ಳಾರಿಗೆ ರೂ. ೧೨೫.೦೦ ಲಕ್ಷಗಳನ್ನು ಸರ್ಕಾರವು ಬಿಡುಗಡೆ ಮಾಡಲಾಗಿದೆ.ಈ ವರ್ಷ ಆಯವ್ಯಯದಲ್ಲಿ ರೂ. ೨೦ ಕೋಟಿ ಯೋಜನೆಯಡಿಯಲ್ಲಿ ಒದಗಿಸಲಾಗಿದೆ.

ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಭೋಧಕ ವರ್ಗದ ಖಾಲಿ ಇರುವ ಹುದ್ದೆಗಳ ವಿವರಗಳು

ಕ್ರ.ಸಂ.	ವಿಭಾಗಗಳು.	1996-97			1995-96			1994-95		
		ಪ್ರಾ	ಸ.ಪ್ರಾ	ಉಪ	ಪ್ರಾ	ಸ.ಪ್ರಾ	ಉಪ	ಪ್ರಾಸ	ಪ್ರಾ	ಉಪ
1	2	3	4	5	6	7	8	9	10	11
1)	ಅಂಗರಚನಾ ಶಾಸ್ತ್ರ	1	-	37	1	-	37	1	-	34
2)	ಶರೀರ ಕ್ರಿಯಾ ಶಾಸ್ತ್ರ	2	3	26	1	3	26	1	1	26
3)	ಜೀವ ರಸಾಯನ ಶಾಸ್ತ್ರ	2	4	14	2	4	14	1	2	14
4)	ಔಷಧ ಶಾಸ್ತ್ರ	5	1	9	4	1	9	4	2	9
5)	ರೋಗ ನಿರೋಧಕ ಶಾಸ್ತ್ರ	4	1	11	4	1	11	4	1	11
6)	ರೋಗ ಲಕ್ಷ ಶಾಸ್ತ್ರ	6	-	30	6	-	30	5	-	28
7)	ಅಣುಜೀವ ಶಾಸ್ತ್ರ	1	6	3	1	6	3	1	6	2
8)	ವಿಧಿವೈದ್ಯ ಶಾಸ್ತ್ರ	2	1	2	2	1	2	2	1	2
9)	ವೈದ್ಯ ಶಾಸ್ತ್ರ	-	13	7	-	13	7	3	9	4
10)	ಶಸ್ತ್ರ ಚಿಕಿತ್ಸಾ ಶಾಸ್ತ್ರ	2	8	12	1	8	12	1	8	5
11)	ಪ್ರಸೂತಿ ಮತ್ತು ಸ್ತ್ರೀ ರೋಗ ಶಾಸ್ತ್ರ	5	5	6	4	5	6	3	4	5
12)	ನೇತ್ರ ಚಿಕಿತ್ಸಾ ಶಾಸ್ತ್ರ	2	5	3	2	5	3	1	5	1
13)	ಕಿವಿ, ಮೂಗು ಮತ್ತು ಗಂಟಲು	2	3	1	2	2	1	2	1	2
14)	ಅಸ್ಥಿಚಿಕಿತ್ಸಾ ಶಾಸ್ತ್ರ	1	3	1	1	3	1	1	3	1
15)	ಚರ್ಮ ಮತ್ತು ಲೈಂಗಿಕ ವ್ಯಾಧಿ	2	3	1	2	3	1	2	1	1
16)	ಅರಿವಳಿಕೆ ಶಾಸ್ತ್ರ	2	4	-	-	4	-	1	4	1
17)	ವಿಕಿರಣ ಶಾಸ್ತ್ರ	2	4	5	-	5	5	-	4	3
18)	ಕ್ಷಯ ರೋಗ ಶಾಸ್ತ್ರ	1	1	-	1	4	-	1	1	1
19)	ಹೃದ್ರೋಗ ಶಾಸ್ತ್ರ	2	4	4	2	4	4	2	5	4
20)	ಮೂತ್ರರೋಗ ಶಾಸ್ತ್ರ	-	2	1	-	2	1	-	2	1

1	2	3	4	5	6	7	8	9	10	11
21)	ಎದೆಗೂಡು ಶಸ್ತ್ರ ಚಿಕಿತ್ಸಾ	3	3	2	3	3	2	3	3	2
22)	ಸುರೂಪಿಕಾ ಶಾಸ್ತ್ರ	-	3	2	-	3	2	-	3	2
23)	ಶಿಶುಶಸ್ತ್ರ ಚಿಕಿತ್ಸಾ ಶಾಸ್ತ್ರ	3	-	2	3	-	2	2	3	1
24)	ಉದರ ಮತ್ತು ಕರುಳುರೋಗ	-	-	-	-	-	-	1	1	-
25)	ಮನೋರೋಗ ಶಾಸ್ತ್ರ	1	-	1	40	-	1	1	-	1
26)	ನರಶಸ್ತ್ರ ಚಿಕಿತ್ಸಾ ಶಾಸ್ತ್ರ	-	3	-	-	3	-	-	3	-
27)	ನರ ವೈದ್ಯ ಶಾಸ್ತ್ರ	1	1	1	-	1	1	-	1	-
28)	ದಂಥ ಶಾಸ್ತ್ರ	4	4	5	4	4	5	3	3	3
29)	ಶಿಶುವೈದ್ಯ ಶಾಸ್ತ್ರ	-	3	2	-	3	2	-	3	2
30)	ನೆಫ್ರಾಲಜಿ	-	1	2	-	1	2	-	1	2
ಒಟ್ಟು·		**57**	**88**	**190**	**48**	**84**	**134**	**46**	**79**	**165**

ಪ್ರಶ್ನೆ ಸಂಖ್ಯೆ : 147

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಮಾನ್ಯ ಅಧ್ಯಕ್ಷರೆ, ಇದರಲ್ಲಿ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸುಮಾರು ಮೂರು ವರ್ಷಗಳಿಂದ ಎಷ್ಟು ಜನ ಶಿಕ್ಷಕರು ಕೊರತೆ ಇದ್ದಾರೆ ಎಂದು ಕೇಳಿದಾಗ ಸುಮಾರು 891 ಜನ ಎಂದು ಕೊಟ್ಟಿದ್ದೀರಿ. ಅಂದರೆ ಬೋಧಕರು ಬೋಧಕೇತರರು ಅದರಲ್ಲಿ ಸಿ ದರ್ಜೆ 105, ಬಿ ದರ್ಜೆ 125 ಎಂದು. ಇದರಲ್ಲಿ ಕಿಮ್ಸ್ ಮತ್ತು ವಿಮ್ಸ್‌ನೊಳಗೆ ಎಷ್ಟು ಹುದ್ದೆಗಳು ಖಾಲಿ ಇವೆ, ಮತ್ತು ಅದನ್ನು ಭರ್ತಿ ಮಾಡುವುದಕ್ಕೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂಬುದು ಒಂದು. ಅದರ ಜೊತೆಗೆ ಈಗ ಸಂಸ್ಥೆಗಳ ಕಟ್ಟಡ ನಿರ್ವಹಣೆಗೆ ಮತ್ತು ಸಾಧನ ಸಲಕರಣೆಗಳನ್ನು ಕೊಳ್ಳುವ ಸಲುವಾಗಿ ಇದರೊಳಗೆ ಸುಮಾರು 12 ಕೋಟಿ ರೂಪಾಯಿಗಳನ್ನು ಮತ್ತು ಹುಬ್ಬಳ್ಳಿ ಕಿಮ್ಸ್ ಮತ್ತು ಬಳ್ಳಾರಿ ವಿಮ್ಸ್‌ಗೆ ಸುಮಾರು 125 ಲಕ್ಷ ರೂಪಾಯಿ ತಾವೇನು ಕೊಟ್ಟಿದ್ದೀರಿ ಇದರಲ್ಲಿ ಎಷ್ಟು ದುಡ್ಡು ಖರ್ಚು ಮಾಡಿದ್ದಾರೆ ಎನ್ನುವುದು ಎರಡನೆಯ ಉಪಪ್ರಶ್ನೆ. ಮತ್ತು ಈಗ ಬೋಧಕರನ್ನು ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದೀರಿ ಅದರೊಳಗೆ ರೋಸ್ಟರ್ ಪದ್ಧತಿಯನ್ನು ಅನುಸರಿಸಿದ್ದಾರಾ ಹೇಗೆ? ದಯವಿಟ್ಟು ತಿಳಿಸಿ?

ಡಾ|| ಎಂ. ಶಂಕರನಾಯಕ್ : ಮಾನ್ಯ ಸಭಾಧ್ಯಕ್ಷರೆ, ಬೋಧಕ ಸಿಬ್ಬಂದಿಗಳ ಖಾಲೀ ಇರತಕ್ಕಂಥ ಹುದ್ದೆ 291, ಅದು ಉತ್ತರದಲ್ಲಿ ತಪ್ಪಾಗಿ 891 ಎಂದು ಆಗಿದೆ. ಸರಿಯಾದಂಥದ್ದು 291. ಅದರ ಪೈಕಿ ಬಳ್ಳಾರಿ ಮತ್ತು ಹುಬ್ಬಳ್ಳಿ ಮೆಡಿಕಲ್ ಕಾಲೇಜುಗಳನ್ನು ಆಟಾನ್‌ಮಸ್ ಸಂಸ್ಥೆಯನ್ನಾಗಿ ಮಾಡಿ ಈ

ಎರಡು ತಿಂಗಳ ಹಿಂದೆ ಸುಮಾರು ಎಲ್ಲಾ ಹುದ್ದೆಗಳು, ಅಂದರೆ ಕೆಲವು ಹುದ್ದೆಗಳಲ್ಲಿ ಕೆಲವು ವಿಷಯಗಳಲ್ಲಿ ಪ್ರಾಧ್ಯಾಪಕರು ಸಿಗುತ್ತಿಲ್ಲ. ಫಾರ್ಮಾಕಾಲಜಿ, ಆಗಲೀ, ಫೊರೆನ್‌ಸಿಕ್ ಆಗಲೀ, ಅನಾಟಮಿ ಆಗಲೀ, ನಾವು ಮೂರ್ನಾಲ್ಕು ಸಾರಿ ಆ ಬಗ್ಗೆ ಜಾಹೀರಾತನ್ನು ಕೊಟ್ಟರೂ ಸಹ ಅದಕ್ಕೆ ಬೋಧಕ ಸಿಬ್ಬಂದಿಯವರು ಬರುತ್ತಾ ಇಲ್ಲ. ಅದನ್ನು ಬಿಟ್ಟು ಬಾಕಿ ಎಲ್ಲಾ ಸಿಬ್ಬಂದಿಗಳು ಎರಡೂ ಕಾಲೇಜುಗಳಲ್ಲೂ ಭರ್ತಿಯಾಗಿದ್ದಾರೆ. ಮತ್ತೆ ನಾವು ಇಲ್ಲಿ ಹೇಳಿರತಕ್ಕ 120 ಲಕ್ಷ ಮತ್ತು 125 ಲಕ್ಷ ಅಡಿಷನಲ್ ಗ್ರಾಂಟ್ ಅಂದರೆ ಬಜೆಟ್‌ನಲ್ಲಿ ಅವರಿಗೆ ಏನು ಗ್ರಾಂಟ್‌ನ್ನು ಒದಗಿಸಲಾಗಿತ್ತು ಅದನ್ನು ಬಿಟ್ಟು ಹೆಚ್ಚಿಗೆ ಗ್ರಾಂಟ್‌ನ್ನು ಈ ವರ್ಷ ಅಂದರೆ 120 ಲಕ್ಷ ಮತ್ತು 125 ಲಕ್ಷ ರೂಪಾಯಿಗಳನ್ನು ಎರಡೂ ಕಾಲೇಜುಗಳಿಗೂ ಕೊಟ್ಟಿದ್ದೇವೆ. ಅದರಲ್ಲಿ ಸುಮಾರು ಹಣ ಬಿಡುಗಡೆಯಾಗಿ ಖರ್ಚೂ ಕೂಡ ಆಗಿದೆ. ನಾವು ಬರುವ ವರ್ಷದಲ್ಲಿ ತಾವು ನಿನ್ನೆ ಬಜೆಟ್‌ನಲ್ಲಿ ನೋಡಿರಬಹುದು, ಎರಡೂ ಸಂಸ್ಥೆಗಳಿಗೆ ಮಾನ್ಯ ವಿತ್ತಮಂತ್ರಿಗಳು ಸುಮಾರು 20 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಅದಕ್ಕಾಗಿ ನಾವು ಹುಬ್ಬಳ್ಳಿ ಮತ್ತು ಬಳ್ಳಾರಿ ಸಂಸ್ಥೆಗಳನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಸರ್ಕಾರ ಆಗಲೇ ಗಮನಹರಿಸಿದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ : ಅದರಲ್ಲಿ ಬಿ ದರ್ಜೆ ಮತ್ತು ಸಿ ದರ್ಜೆ ಸಿಬ್ಬಂದಿಯವರನ್ನು ಏನು ನೇಮಕಾತಿ ಮಾಡಿಕೊಂಡಿದ್ದೀರಿ, ಆ ರೀತಿ ನೇಮಕ ಮಾಡಿಕೊಳ್ಳುವಾಗ ರೋಸ್ಟರ್‌ನ್ನು ಅನುಸರಿಸಿದ್ದಾರೋ ಇಲ್ಲವೋ ?

ಡಾ|| ಎಂ.ಶಂಕರನಾಯಕ್ : ಈಗ ಆಗಿರತಕ್ಕ ಎಲ್ಲಾ ನೇಮಕಾತಿಗಳನ್ನು ರೋಸ್ಟರ್ ಪದ್ಧತಿಯನ್ನು ಅನುಸರಿಸಿಯೇ ಮಾಡಿದ್ದೇವೆ. "ಡಿ" ದರ್ಜೆಯನ್ನು ನೇಮಕ ಮಾಡಿಕೊಳ್ಳಬಾರದು ಎಂದು ಹೇಳಿ ನಮಗೆ ಉದ್ದೇಶ ಇದೆ. ಕಾರಣ ಅವರ ಕಡೆ ಕೆಲಸ ತೆಗೆದುಕೊಳ್ಳತಕ್ಕಂಥದ್ದು ಮತ್ತು ಬೇರೆ ಸಂಸ್ಥೆಗಳು ಇರುವುದರಿಂದ, ದೊಡ್ಡ ಆಸ್ಪತ್ರೆಗಳನ್ನು ಕ್ಲೀನ್ ಮಾಡಲಿಕ್ಕೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೊಡಬೇಕು ಎಂದು ನಾವು ಕಾಯುತ್ತಿದ್ದೇವೆ. ಈಗ ಇರತಕ್ಕಂಥ ಹುದ್ದೆಗಳನ್ನು ಇರತಕ್ಕ ಕೆಲಸಗಾರರನ್ನು ನಾವು ತೆಗೆಯಲಿಕ್ಕೆ ಆಗುವುದಿಲ್ಲ. ಅವರನ್ನು ಒಂದು ಕಡೆ ವರ್ಗಾಯಿಸಿ ಬಾಕಿ ಇರತಕ್ಕಂಥ ಆಸ್ಪತ್ರೆಗಳಲ್ಲಾಗಲೀ, ಕಾಲೇಜುಗಳಲ್ಲಾಗಲೀ ಅದನ್ನು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಪ್ರತಿವರ್ಷ ಕೊಡಬೇಕೆಂದು ಸರ್ಕಾರದ ಗಮನದಲ್ಲಿರುವುದರಿಂದ ಅದನ್ನು ಭರ್ತಿ ಮಾಡಿಲ್ಲ. ಆ ಕೆಲಸ ಆಗತಕ್ಕಂಥದ್ದನ್ನು ನಾವು ಕಾಂಟ್ರಾಕ್ಟ್ ಬೇಸಿಸ್ ಮೇಲೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಅಧ್ಯಕ್ಷರು : ವಿಶ್ವೇಶ್ವರ ಹೆಗಡೆಯವರೇ, ಅರಣ್ಯ ಮಂತ್ರಿಗಳು ಅವರ ಮಗಳ ಮದುವೆ ಇರುವುದರಿಂದ ಹೋಗಿದ್ದಾರೆ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಮುಂದೆ ತೆಗೆದುಕೊಳ್ಳೋಣ. ಅವರೇ ನನ್ನ ಹತ್ತಿರ ನಿನ್ನೆ ಬಂದಿದ್ದರು. ನಾನೇ ಬಂದು ಹೇಳುತ್ತೇನೆ. ನಾನು ಇನ್ನೊಬ್ಬರಿಗೆ ಒಪ್ಪಿಸುವುದಿಲ್ಲ. ನಾನೇ ಹೇಳಿದರೆ ಮತ್ತೆ ನನಗೆ ಕಂಟಿನ್ಯೂಟಿಗೆ ಅನುಕೂಲವಾಗುತ್ತದೆ ಎಂದರು. ನಾನೇ ಪರ್ಮಿಟ್ ಮಾಡಿದೆ, ಮಾಡಬಹುದು. ಬೇರೆಯವರಿಗೆ ಒಪ್ಪಿಸಿ ಹೋಗಬಹುದು. ಆದರೆ ಅದು ಅಷ್ಟು ತೃಪ್ತಿದಾಯಕ

ವಾಗುವುದಿಲ್ಲವೆಂದು ನಾನೇ ಅವರಿಗೆ ಅನುಮತಿ ನೀಡಿದ್ದೇನೆ. ಮುಂದಿನ ಅವರ ಬಿಸಿನೆಸ್ ದಿವಸ ಲೀಸ್ಟ್ ಮಾಡಿಸುತ್ತೇನೆ.

ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷ - ಉಪಾಧ್ಯಕ್ಷರ ಚುನಾವಣೆ

149 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈಗ ನಡೆಯುಲ್ಲಿರುವ ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ಮೀಸಲಾತಿ ಮಾಡುವಾಗ ಸರ್ಕಾರ ಅನುಸರಿಸಿದ ಪದ್ಧತಿ ಯಾವುದು;

ಆ) ರಾಜಕೀಯ ಹಸ್ತಕ್ಷೇಪ ಪ್ರಭಾವ ಬೀರದ ಹಾಗೆ ಮೀಸಲಾತಿ ನಿರ್ಣಯಗಳು ಆಗಿದೆಯೇ?

ಇ) ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷ ಉಪಾಧ್ಯಕ್ಷರ ಪದವಿಗಳಿಗೆ ಈ ಮೊದಲು ಇದ್ದ ಮೀಸಲಾತಿ ಯಾವುವು? ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿಗಳಾವುವು? ಜಿಲ್ಲಾವಾರು ಮಾಹಿತಿ ನೀಡುವುದು)

ಈ) ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಅಧ್ಯಕ್ಷ, ಉಪಾಧ್ಯಕ್ಷ ಪದವಿಗಳಿಗೆ ಈ ಮೊದಲು ಇದ್ದ ಮೀಸಲಾತಿ ಏನು? ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿಗಳಾವುವು? (ತಾಲ್ಲೂಕುವಾರು ಮಾಹಿತಿ ನೀಡುವುದು)

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕರ್ನಾಟಕ ಪಂಚಾಯತ್ ರಾಜ್ (ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು 1995 ಹಾಗೂ ಕರ್ನಾಟಕ ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ) ನಿಯಮಗಳು 1995ರಲ್ಲಿ ನಿಗಧಿಪಡಿಸಲಾದ ಪದ್ಧತಿಯನ್ನು ಅನುಸರಿಸಿ ಈಗ ನಡೆಯಲಿರುವ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಉಪಾಧ್ಯಕ್ಷರ ಚುನಾವಣೆಗೆ ಮೀಸಲಾತಿ ಮಾಡಲಾಗಿದೆ.

ಆ) ಹೌದು.

ಇ) ಜಿಲ್ಲಾ ಪಂಚಾಯತಿಯಲ್ಲಿ ಮೊದಲಿದ್ದ ಮೀಸಲಾತಿ ಆದೇಶ ಸಂಖ್ಯೆ: ಗ್ರಾಅಪ. 147 ಜಿಪಸ.95 ದಿನಾಂಕ 18-7-95 ಮತ್ತು ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿ ಆದೇಶ ಗ್ರಾಅಪ 315. ಜಿಪಸ. 96 ದಿ : 7-3-97. ಆದೇಶಗಳ ಪ್ರತಿಗಳನ್ನು ಲಗತ್ತಿಸಿದೆ.

ಈ) ಈ ಹಿಂದೆ ಇದ್ದ ಮೀಸಲಾತಿ ಬಗ್ಗೆ ಆದೇಶ ಸಂಖ್ಯೆ : ಗ್ರಾಅಪ : 148 : ಜಿಪಸ : 95 ದಿ: 18-2-95 ಮತ್ತು ಮುಂಬರುವ ಚುನಾವಣೆಗೆ ನಿರ್ಧರಿಸಿದ ಮೀಸಲಾತಿ ಆದೇಶ ಸಂಖ್ಯೆ: ಗ್ರಾಅಪ:427:ತಾಪಸ:96 ದಿನಾಂಕ : 7-3-97.